# ಹಿರಿಯ ಶ್ರೇಣಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಕೂಡ್ಲಿಗಿ

# ಸಿ ಸಿ - 884/2022

ದಿನಾಂಕಃ 06.04.2026 ರಂದು ಸಾಕ್ಷಿದಾರರಿಗೆ, ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.

| | | |
|---|---|---|
| ಹೆಸರು | : | ಸೋಮಶೇಖರ್ ಕೆಂಚರೆಡ್ಡಿ |
| ತಂದೆಯ ಹೆಸರು | : | ಷಣ್ಮುಖಪ್ಪ |
| ವಯಸ್ಸು | : | 42 ವರ್ಷ |
| ಉದ್ಯೋಗ | : | ಪಿ.ಐ, ಮಾನ್ವಿ ಪೊಲೀಸ್ ಠಾಣೆ |
| ವಾಸಸ್ಥಳ | : | ಮಾನ್ವಿ |

## ಮುಖ್ಯ ವಿಚಾರಣೆ ಸ.ಸ.ಅ ರವರಿಂದಃ

ನಾನು ಜನವರಿ-2022 ರಿಂದ ಫೆಬ್ರವರಿ-2023 ರವರೆಗೆ ಪೊಲೀಸ್ ವೃತ್ತ ನಿರೀಕ್ಷಕರೆಂದು ಕೊಟ್ಟೂರಿನಲ್ಲಿ ಎಂದು ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ 27.02.2022 ರಂದು ಈ ಪ್ರಕರಣದ ಕಡತವನ್ನು ಚಾ.ಸಾ 19 ರವರಿಂದ ಪಡೆದುಕೊಂಡು ತನಿಖೆ ಮುಂದುವರೆಸಿರುತ್ತೇನೆ. ಅದೇ ದಿನ ಘಟನಾಸ್ಥಳಕ್ಕೆ ಭೇಟಿ ನೀಡಿ ಚಾ.ಸಾ 6 ಮತ್ತು 7 ರವರ ಸಮಕ್ಷಮ ಚಾ.ಸಾ 1 ರವರು ಸ್ಥಳ ತೋರಿಸಿದ ಮೇರೆಗೆ ಅಪಘಾತ ಸ್ಥಳದಲ್ಲಿ ಬೆಳಿಗ್ಗೆ 11-30 ರಿಂದ 12-30 ಗಂಟೆಯವರೆಗೆ ಪಂಚನಾಮೆ ಜರುಗಿಸಿರುತ್ತೇನೆ. ಆ ಕಾಲಕ್ಕೆ ಕಚ್ಚಾ ನಕಾಶೆ ತಯಾರಿಸಿ ಭಾವಚಿತ್ರಗಳನ್ನು ತೆಗೆಸಿರುತ್ತೇನೆ.

ಸದರಿ ಪಂಚನಾಮೆಯನ್ನು ಈಗಾಗಲೆ ನಿ.ಪಿ 2 ಎಂದು ಗುರುತಿಸಿದ್ದು, ಅದರಲ್ಲಿರುವ ನನ್ನ ಸಹಿಯನ್ನು ನಿ.ಪಿ 2-ಬಿ ಎಂದು ಗುರುತಿಸಲಾಯಿತು. ಭಾವಚಿತ್ರಗಳನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೆ 3 ಮತ್ತು 4 ಎಂದು ಗುರುತಿಸಲಾಗಿದೆ. ಸದರಿ ಕಚ್ಚಾ ನಕಾಶೆಯನ್ನು ನೋಡಿ ಗುರುತಿಸಿದ್ದು ಅದನ್ನು ನಿ.ಪಿ 7 ಎಂದು, ಅದರಲ್ಲಿರುವ ನನ್ನ ಸಹಿಯನ್ನು ನಿ.ಪಿ 7-ಎ ಎಂದು ಗುರುತಿಸಲಾಯಿತು.

ಅದೇ ದಿನ ಹೊಸಹಳ್ಳಿ ಪೊಲೀಸ್ ಠಾಣೆಗೆ ಭೇಟಿ ನೀಡಿದ್ದು ಚಾ.ಸಾ 12 ರವರು ಅಪಘಾತಕ್ಕೆ ಒಳಗಾದ ವಾಹನಗಳ ಕಾರ್ ನೊಂದಣಿ ಸಂಖ್ಯೆ ಕೆಎ-03./ಎನ್.ಎಲ್-1085 ಮತ್ತು ಮೊ.ಸೈ ನಂಃ ಕೆಎ-35/ಇ.ಕೆ-3722 ನೇದ್ದವುಗಳನ್ನು ಹಾಜರುಪಡಿಸಿದ

ಮೇರೆಗೆ ಪಂಚರಾದ ಚಾ.ಸಾ 8 ಮತ್ತು 9 ರವರ ಸಮಕ್ಷಮ ಮಧ್ಯಾಹ್ನ 1-00 ರಿಂದ 2-00 ಗಂಟೆಯವರೆಗೆ ಜಪ್ತುಪಡಿಸಿಕೊಂಡು ಜಪ್ತು ಪಂಚನಾಮೆ ಜರುಗಿಸಿರುತ್ತೇನೆ. ಆ ಕಾಲಕ್ಕೆ ಭಾವಚಿತ್ರ ತೆಗೆಸಿರುತ್ತೇನೆ. ಅಮಾನತ್ತುಪಡಿಸಿಕೊಂಡ ವಾಹನಗಳನ್ನು ಸ್ವತ್ತುಪಟ್ಟಿಯಲ್ಲಿ ಅಳವಡಿಸಿಕೊಂಡು ಮಾನ್ಯ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ. ಚಾ.ಸಾ 12 ರಿಂದ 14 ಮತ್ತು 16 ರವರ ಹೇಳಿಕೆಗಳನ್ನು ಪಡೆದಿರುತ್ತೇನೆ. ಚಾ.ಸಾ 13 ರವರಿಂದ ಕಲಂ 65-ಬಿ ರಡಿ ಪ್ರಮಾಣ ಪತ್ರವನ್ನು ಪಡೆದು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ.

ಸದರಿ ಜಪ್ತು ಪಂಚನಾಮೆಯನ್ನು ನೋಡಿ ಗುರುತಿಸಿದ್ದು ಅದನ್ನು ನಿ.ಪಿ 8 ಎಂದು, ಅದರಲ್ಲಿರುವ ನನ್ನ ಸಹಿಯನ್ನು ನಿ.ಪಿ 8-ಎ ಎಂದು ಗುರುತಿಸಲಾಯಿತು.

ದಿಃ 02.03.2022 ರಂದು ಹೊಸಪೇಟೆ ಆರ್.ಟಿ.ಓ ರವರಿಗೆ ಅಮಾನತ್ತುಪಡಿಸಿಕೊಂಡ ವಾಹನಗಳ ತಪಾಸಣೆಗಾಗಿ ಮನವಿ ಪತ್ರ ಸಲ್ಲಿಸಿರುತ್ತೇನೆ.

ದಿಃ 03.03.2022 ರಂದು ಅಪಘಾತಪಡಿಸಿದ ವಾಹನದ ಆರೋಪಿ ಠಾಣೆಗೆ ಹಾಜರಾಗಿದ್ದು ಅವರನ್ನು ವಿಚಾರಣೆ ಮಾಡಿ ದಸ್ತಗಿರಿ ಮಾಡಿ ದಸ್ತಗಿರಿ ಕ್ರಮ ಜರುಗಿಸಿ ಸೂಕ್ತ ಜಾಮೀನಿನ ಮೇಲೆ ಬಿಡುಗಡೆ ಮಾಡಿರುತ್ತೇನೆ. ಕಾರ್ ನ ಮಾಲೀಕ ಚಾ.ಸಾ 11 ರವರಿಗೆ ಕಲಂ 133 ರಡಿ ನೋಟೀಸ್ ನೀಡಿ ಅವರಿಂದ ಉತ್ತರ ಪಡೆದಿರುತ್ತೇನೆ. ಆ ನಂತರ ಅವರಿಂದ ಇಂಡಮ್ನಿಟಿ ಬಾಂಡ್ ಪಡೆದು ವಾಹನ ಅವರಿಗೆ ಬಿಡುಗಡೆ ಮಾಡಿರುತ್ತೇನೆ. ಚಾ.ಸಾ 10 ಮತ್ತು 11 ರವರ ಹೇಳಿಕೆಗಳನ್ನು ಪಡೆದಿರುತ್ತೇನೆ. ತದ ನಂತರ ಆರ್.ಟಿ.ಓ ಹೊಸಪೇಟೆಯವರಿಂದ ಐ.ಎಂ.ವಿ ವರದಿ ಬಂದಿದ್ದು ಅದನ್ನು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ.

ಸದರಿ ಇಂಡಮ್ನಿಟಿ ಬಾಂಡ್ ನ್ನು ನೋಡಿ ಗುರುತಿಸಿದ್ದು ಅದನ್ನು ನಿ.ಪಿ 9 ಎಂದು, ಅದರಲ್ಲಿರುವ ನನ್ನ ಸಹಿಯನ್ನು ನಿ.ಪಿ 9-ಎ ಎಂದು ಗುರುತಿಸಲಾಯಿತು. ಸದರಿ ಐ.ಎಂ.ವಿ ವರದಿಯನ್ನು ಈಗಾಗಲೆ ನಿ.ಪಿ 6 ಎಂದು ಗುರುತಿಸಿದ್ದು, ಅದರಲ್ಲಿರುವ ನನ್ನ ಸಹಿಯನ್ನು ನಿ.ಪಿ 6-ಎ ಎಂದು ಗುರುತಿಸಲಾಯಿತು.

ದಿಃ 30.03.2022 ರಂದು ಮೊ.ಸೈ ನ ಮಾಲೀಕರಿಗೆ ಕಲಂ 133 ರಡಿ ನೋಟೀಸ್ ನೀಡಿ ಅವರಿಂದ ಉತ್ತರ ಪಡೆದಿರುತ್ತೇನೆ. ಆ ನಂತರ ಅವರಿಂದ ಇಂಡಮ್ನಿಟಿ ಬಾಂಡ್ ಪಡೆದು ವಾಹನ ಅವರಿಗೆ ಬಿಡುಗಡೆ ಮಾಡಿರುತ್ತೇನೆ. ಆರೋಪಿ ನಂಃ 4 ರವರ ಹೇಳಿಕೆಯನ್ನು ಪಡೆದಿರುತ್ತೇನೆ. ಚಾಸಾ 15 ರವರ ಹೇಳಿಕೆಯನ್ನು ಪಡೆದಿರುತ್ತೇನೆ. ಚಾ.ಸಾ

15 ರವರಿಂದ ಕಲಂ 65-ಬಿ ರಡಿ ಪ್ರಮಾಣ ಪತ್ರವನ್ನು ಪಡೆದು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ಚಿತ್ರದುರ್ಗ ರಾಷ್ಟ್ರೀಯ  ಹೆದ್ದಾರಿ ಪ್ರಾಧಿಕಾರ ಯೋಜನೆ ನಿರ್ದೇಶಕರಿಗೆ ನೋಟೀಸ್ ನೀಡಿ ರಸ್ತೆ ನಿರ್ಮಾಣದಲ್ಲಿ ನ್ಯೂನತೆಗಳು ಇವೆಯೇ ಎಂದು ಮಾಹಿತಿ ಕೋರಿ ನೋಟೀಸ್ ನೀಡಿರುತ್ತೇನೆ.

ಸದರಿ ಇಂಡಮ್ನಿಟಿ ಬಾಂಡ್ ನ್ನು ನೋಡಿ ಗುರುತಿಸಿದ್ದು ಅದನ್ನು ನಿ.ಪಿ 10 ಎಂದು, ಅದರಲ್ಲಿರುವ ನನ್ನ ಸಹಿಯನ್ನು ನಿ.ಪಿ 10-ಎ ಎಂದು ಗುರುತಿಸಲಾಯಿತು.

ದಿಃ 04.04.2022 ರಂದು ಮೃತರ ಪಿ.ಎಂ ವರದಿಯನ್ನು ಪಡೆದು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ಸದರಿ ಪಿ.ಎಂ ವರದಿಯನ್ನು ಈಗಾಗಲೆ ನಿ.ಪಿ 5 ಎಂದು ಗುರುತಿಸಿದ್ದು, ಅದರಲ್ಲಿರುವ ನನ್ನ ಸಹಿಯನ್ನು ನಿ.ಪಿ 5-ಎ ಎಂದು ಗುರುತಿಸಲಾಯಿತು.

ದಿಃ 10.05.2022 ರಂದು ಎಲ್.ಎನ್.ಟಿ ಕಂಪೆನಿಯ ಮುಖ್ಯ ಯೋಜನಾಧಿಕಾರಿಗೆ ನೋಟೀಸ್ ನ್ನು ನೀಡಿರುತ್ತೇನೆ.

ದಿಃ 11.05.2022 ರಂದು ಎಲ್.ಎನ್.ಟಿ ಕಂಪೆನಿಯ ಮಾನವ ಸಂಪನ್ಮೂಲ ಅಧಿಕಾರಿ ಠಾಣೆಗೆ ಹಾಜರಾಗಿದ್ದು ಅವರು ದಾಖಲೆಗಳನ್ನು ನೀಡಿದ್ದು ಅವುಗಳನ್ನು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ.

ದಿಃ 02.09.2022 ರಂದು ಟಾಟಾ ಕಂಪೆನಿಯ  ಮುಖ್ಯ ಯೋಜನಾಧಿಕಾರಿಗಳು ಠಾಣೆಗೆ ಹಾಜರಾಗಿದ್ದು ಅವರ ಹೇಳಿಕೆಗಳನ್ನು ಪಡೆದು ಕಡತಕ್ಕೆ ಅಳವಡಿಸಿರುತ್ತೇನೆ.

ದಿಃ 05.09.2022 ರಂದು ಸಹಾಯದ ಕಾರ್ಯ ಪಾಲಕ ಇಂಜಿನಿಯರ್ ರವರಿಗೆ ನೋಟೀಸ್ ನೀಡಿರುತ್ತೇನೆ.

ದಿಃ 07.09.2022 ರಂದು ಪಿ.ಡಬ್ಲ್ಯೂ.ಡಿ ಇಲಾಖೆಯವರು ವರದಿ ನೀಡಿದ್ದು ಅದನ್ನು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ಚಾ.ಸಾ 1, 4 ಮತ್ತು 5 ರವರ ಮರು ಹೇಳಿಕೆಗಳನ್ನು ಪಡೆದಿರುತ್ತೇನೆ.

ದಿಃ 28.09.2022 ರಂದು ಈ ಪ್ರಕರಣದ ತನಿಖೆ ಪೂರ್ಣಗೊಂಡಿದ್ದರಿಂದ ಆರೋಪಿಯ ವಿರುದ್ಧ ದೋಷಾರೋಪಣೆ ಪತ್ರ ಸಲ್ಲಿಸಿರುತ್ತೇನೆ.

ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ. ಈ ದಿನ ಆರೋಪಿ ಗೈರು ಹಾಜರಿದ್ದು ಅವರ ಗುರುತಿಗಾಗಿ ಅವರ ಪರ ವಕೀಲರು ತಕರಾರು ಇಲ್ಲ ಎಂದು ತಿಳಿಸಿರುತ್ತಾರೆ.

**<u>ಪಾಟೀ ಸವಾಲು ಆರೋಪಿ ಪರ ವಕೀಲರಿಂದಃ</u>**

ಆರೋಪಿ ತನ್ನ ವಾಹನದಲ್ಲಿ ಕೂಡ್ಲಿಗಿಯಿಂದ ಚಿತ್ರದುರ್ಗದ ಕಡೆ ಹೋಗುತ್ತಿದ್ದರು ಎಂದರೆ ಸರಿ. ಸದರಿ ರಸ್ತೆಯಲ್ಲಿ ವಾಹನಗಳು ಅಡ್ಡಲಾಗಿ ಚಲಿಸಲು ನಿಷೇದ ಇತ್ತು ಎಂದರೆ ಸರಿ. ಆತ ರೋಡ್ ನ್ನು ಕ್ರಾಸ್ ಮಾಡಿದ್ದರಿಂದ ಆತನ ತಪ್ಪಿನಿಂದ ಅಪಘಾತವಾಗಿದೆ ಎಂದರೆ ಸರಿಯಲ್ಲ. ಆ ಕಾಲಕ್ಕೆ ಆರೋಪಿಯ ಮುಂದುಗಡೆ ಒಂದು ಲಾರಿ ಇದ್ದುದ್ದರಿಂದ ಮೃತ ವ್ಯಕ್ತಿಯ ವಾಹನ ಆರೋಪಿಗೆ ಕಂಡಿಲ್ಲ ಎಂದರೆ ಸರಿಯಲ್ಲ. ಸಾಕ್ಷಿದಾರರ ಹೇಳಿಕೆಗಳನ್ನು ಪಡೆದಿಲ್ಲ ಎಂದರೆ ಸರಿಯಲ್ಲ. ಯಾವುದೇ ಸ್ಥಳಕ್ಕೆ ಹೋಗಿಲ್ಲ, ಕೃತ್ಯಸ್ಥಳ ಪಂಚನಾಮೆ ಮಾಡಿಲ್ಲ, ವಾಹನಗಳನ್ನು ಜಪ್ತುಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ಆರೋಪಿ ಯಾವುದೇ ತಪ್ಪನ್ನು ಮಾಡದೆ ಇದ್ದರು ಮೃತ ವ್ಯಕ್ತಿ ಕುಟುಂಬಕ್ಕೆ ಪರಿಹಾರ ಕೊಡಿಸುವ ಸಲುವಾಗಿ ಆರೋಪಿ ವಿರುದ್ಧ ಸುಳ್ಳು ದೋಷರೋಪಣೆ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.)

**ಓ,ಹೇ,ಕೇ,ಸರಿ ಇದೆ,**

**ಹಿ.ಸಿ.ಜೆ ಮತ್ತು ಜೆ.ಎಂ.ಎಫ್.ಸಿ**
**ಕೂಡ್ಲಿಗಿ.**